**ಎಸ್.ಸಿ.ಸಂಖ್ಯೆಃ10035/2025**
**ಪ್ರಾ.ಸಾ.ಸಂಖ್ಯೆಃ 2**
**ಚಾ.ಸಾ.ಸಂಖ್ಯೆಃ 3**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಸಂತೋಷ ಅಗಸಿಮನಿ |
| ತಂದೆಯ ಹೆಸರುಃ | ಯಮನಪ್ಪ |
| ವಯಸ್ಸುಃ | **26** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ಮಂಟೂರ |

**ಸಾಕ್ಷಿಯನ್ನು ದಿಃ 18.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ನನಗೆ ಚಾಸಾ-**1** ಹಾಗೂ ಆರೋಪಿತರ ಪರಿಚಯವಿದೆ. ದಿ: **19.05.2023** ರಂದು ಚಾಸಾ-**1** ಇವರ ಮನೆಗೆ ಪೊಲೀಸರು ಬಂದಿದ್ದರು. ಆಗ ನನ್ನನ್ನು ಚಾಸಾ-**9** ಮಂಜು ಕರೆದರು. ನಾನು ಅಲ್ಲಿಗೆ ಹೋದಾಗ ಪಂಚನಾಗಿ ಭಾಗವಹಿಸಿ ಕೇಳಿದರು. ಚಾಸಾ-**9** ರವರು ಜಾಗೆ ತೋರಿಸಿದರು. ಅಲ್ಲಿ ಒಂದು ಕಲ್ಲು ಬಿದ್ದಿತ್ತು, ಒಂದು ರಕ್ತ ಹತ್ತಿದ ತಲೆದಿಂಬು, ಒಂದು ಕೆಂಪು ರಕ್ತ ಹತ್ತಿದ ಟಾಪ ಇತ್ತು. ಅಲ್ಲಿ ಪೊಲೀಸರು ಪೊಟೊ ಹೊಡೆದರು. ಈಗ ನೋಡುತ್ತಿರುವ ಪಂಚನಾಮೆ ಮಾಡಿದರು. ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. (ಸದರಿ ಪಂಚನಾಮೆಯನ್ನು ನಿಪಿ-**21** ಅಂತ ಸಾಕ್ಷಿದಾರರ ಸಹಿಯನ್ನು ನಿಪಿ-**21**(ಎ) ಅಂತ ಗುರುತಿಸಲಾಯಿತು). ಈಗ ನಾನು ನೋಡುತ್ತಿರುವ ಮುಮಾ-**1** ರಿಂದ **3** ಆಗ ಸ್ಥಳದಲ್ಲಿದ್ದ ವಸ್ತುಗಳು ಇರುತ್ತವೆ. ಪೊಲೀಸರು ಅವುಗಳನ್ನು ವಶಕ್ಕೆ ತೆಗೆದುಕೊಂಡರು.

**<u>ಪಾಟಿಸವಾಲುಃ 1 & 2ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದಃ</u>**

**1.** ಪಂಚನಾಮೆಯನ್ನು ಒಬ್ಬ ಪೊಲೀಸರು ಬರೆದರು. ಮಾಹಿತಿಯನ್ನು ಚಾಸಾ-**9** ನೀಡಿದರು. ನಮಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ. ನಿಪಿ-**21** ಕ್ಕೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ಚಾಸಾ-**1**

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 2**
**ಚಾ.ಸಾ.ಸಂಖ್ಯೆ: 3**

ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಒಣಿಯವರು ಇರುತ್ತಾರೆ. ಮುಮಾ-**1** ರಿಂದ **3** ಇವುಗಳನ್ನು ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಮುಮಾ-**1** ರಿಂದ **3** ನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-**9** ಇವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:</u>**

**1.** ಪೊಲೀಸರು ನನಗೆ ಘಟನಾ ಸ್ಥಳಕ್ಕೆ ಪಂಚರಾಗಿ ಬರಲು ನೋಟೀಸು ನೀಡಿದ್ದರು. ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ನನಗೆ ನೋಟೀಸು ನೀಡಿಲ್ಲ. ಚಾಸಾ-**1** ಇವರು ನನಗೆ ಮೊದಲಿನಿಂದಲೂ ಪರಿಚಯ ಎಂದರೆ ಸರಿ. ಚಾಸಾ-**1** ಪ್ರಕರಣಕ್ಕೆ ಅನುಕೂಲವಾಗಲು ನನ್ನನ್ನು ಕರೆಸಿದರು ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕಬಂದಿ ನನಗೆ ಗೊತ್ತಿದೆ. ಪೊಲೀಸ್ ಠಾಣೆಯಲ್ಲಿಯೇ ನಿಪಿ-**21** ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆ ಮಾಡುವಾಗ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-**1** ಇವರ ಕುಟುಂಬದವರ ಕೊರಿಕೆಯ ಮೆರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**